# <u>ಮೆಃ ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ</u>

C.C.No.1283/2021
CW-1/PW-1

| | |
|---|---|
| ಹೆಸರು | ರಮೇಶ ಬೇಳಿವರಿ |
| ಗಂಡನ ಹೆಸರು | ಸಿದ್ದಪ್ಪ |
| ವಯಸ್ಸು | 36 ವರ್ಷ |
| ಉದ್ಯೋಗ | ಚಾಲಕ ಕಮ್ ನಿರ್ವಾಹಕ {KSRTC} |
| ವಾಸಸ್ಥಳ | ಹುಲಕುಂದ ತಾ.ರಾಮದುರ್ಗ |

**ದಿನಾಂಕಃ 17-01-2024 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ ಃ</u>**

1 ನೇ ಆರೋಪಿ ನನ್ನ ಹೆಂಡತಿ ತಮ್ಮ. 1 ನೇ ಆರೋಪಿ ನನ್ನ ಹೆಂಡತಿ ಅಣ್ಣ. 3 ನೇ ಆರೋಪಿ ಮಂಜೂಳಾ ನನ್ನ ಧರ್ಮ ಪತ್ನಿ. 4 ನೇ ಆರೋಪಿ ನನ್ನ ಹೆಂಡತಿ ತಾಯಿ.

ನನ್ನ ಮತ್ತು 3 ನೇ ಆರೋಪಿಯಮದುವೆ ದಿನಾಂಕ 22.05.2013 ರಂದು ಹುಲಕುಂದ ಗ್ರಾಮದಲ್ಲಿ ಆಗಿರುತ್ತದೆ. ನನ್ನ ಮೋದಲ ಮಗಳ ಹೆಸರು ಸೌಜನ್ಯ. ಎರಡನೇ ಮಗಳ ಹೆಸರು ಪೂರ್ವಿತಾ.

ನಮ್ಮ ಮನೆಯಲ್ಲಿ ನಾನು ನನ್ನ ತಾಯಿ ಮತ್ತು ನನ್ನ ದೊಡ್ಡ ಮಗಳು ಇರುತ್ತೇವೆ.

ನನ್ನ ಹೆಂಡತಿ 2 ನೇ ಮಗುವಿನ ಬಾನಂತನಕ್ಕಾಗಿ 2019 ನೇ ಸಾಲಿನಲ್ಲಿ ಆಕೆಯ ತವರು ಮನೆ ನಾಗನಾಪೂರಕ್ಕೆ ಹೋಗಿರುತ್ತಾಳೆ. ನಾನು ಹೇರಿಗೆ ಆದ ನಂತರ ಆಕೆಯನ್ನು ಕರೆಯಲು ನಾಗನಾಪುರಕ್ಕೆ ಹೋದಾಗ ಆಕೆಯು ಕಕನನ್ನ ತಾಯಿಯನ್ನು ನೋಡಿಕೊಳ್ಳುಲು ಆಗುವುದಿಲ್ಲ ಆಕೆಯ ಜೊತೆ ಇರಲು ಆಗುವುದಿಲ್ಲ ಹಾಗಾಗಿ ನಾನು ಬರುವುದಿಲ್ಲ ಎಂದು ನೀರಾಕರಿಸಿದಳು. ನಂತರ ನಾನು ನಮ್ಮ ಊರಿಗೆ ಹಿಂದಿರುಗಿ ನನ್ನ ತಾಯಿ ಮತ್ತು ಹಿರಿಯರೊಂದಿಗೆ ಮಾತನಾಡಿ ನಾಗನಾಪುರದ 3 ನೇ ಆರೋಪಿ ಇದ್ದ ಮನೆಗೆ ಕರೆದುಕೊಂಡು ಹೋಗಿ ಮಾತುಕತೆ ಮಾಡಿದ ನಂತರ 3 ನೇ ಆರೋಪಿ ಯುಗಾದಿ ಹಬ್ಬ ಮುಗಿದ ನಂತರ ನನ್ನ ಮನೆಗೆ ಬರುವುದಾಗಿ ತಿಳಿಸಿದಳು.

ಯುಗಾದಿ ಹಬ್ಬ ಮುಗಿದ ನಂತರ 2-3 ತಿಂಗಳುಗಳ ಕಾಲ ಕಾಯ್ದು ಮತ್ತೆ ದಿನಾಂಕ 07.05.2021 ರಂದು ಆಕೆಯನ್ನು ಕರೆಯಲು ನಾಗನಾಪುರ ಗ್ರಾಮಕ್ಕೆ ನಾನು ನನ್ನ ತಾಯಿ ನನ್ನ ಚಿಕ್ಕಪ್ಪ, ಚಾಸಾ-6 ರವರು ಹೋದೇವು. ಅಲ್ಲಿ ನಾಗನಾಪುರದ ಗ್ರಾಮಸ್ಥರು ಮತ್ತು ಲೋಕಾಪುರದ ಗ್ರಾಮಸ್ಥರು ಸಂಸಾರ ಸರಿದೂಗಿಸಿಕೊಂಡು ಹೋಗಿ ಎಂದು ಬುದ್ದಿಮಾತು ಹೇಳಿದರು. ಆಗ 4 ನೇ ಆರೋಪಿ ಮತ್ತು 2 ನೇ ಆರೋಪಿ ಸಿದ್ದಪ್ಪ ನನಗೆ ಬಾಯಿಗೆ ಬಂದಂತೆ ಬೊಸಡಿ ಮಗನೆ, ರಂಡಿ ಮಗನೆ, ಜೋಕುಮಾರ ನಿನ್ನ ಮನೆಗೆ ನನ್ನ ಮಗಳನ್ನು ಕಳುಹಿಸುವುದಿಲ್ಲ ಎಂದು ಬೈಯಲು ಪ್ರಾರಂಬಿಸಿದರು.

ಮತ್ತೆ ಹಿರಿಯರು ಜಗಳ ಮಾಡಬೇಡಿ ಎಂದು ಬುದ್ದಿವಾದ ಹೇಳಿದರು. ಆಗ 1 ನೇ ಆರೋಪಿ ನನಗೆ ಹೋಡಿ ಬಡಿ ಮಾಡಿ ನನ್ನ ಅಂಗಿಯನ್ನು ಹಿಡಿದು ಕೈಯಿಂದ ಬೆನ್ನಿಗೆ ಹೊಟ್ಟೆಗೆ ಹಲ್ಲೆ ಮಾಡಿದನು. ಬಿಡಿಸಲು ಬಂದ ದುಂಡಪ್ಪ ನಿಂಗನ್ನನವರ ಅವರಿಗೆ 1 ನೇ ಆರೋಪಿ ಕಲ್ಲಿನಿಂದ ತಲೆಗೆ ಹೊಡೆದನು. ತಕ್ಷಣ ಅಲ್ಲಿದ್ದ ಊರಿನವರೆಲ್ಲರೂ ಬಂದು ಜಗಳ ಮಾಡಬೇಡಿ ಎಂದು ಗಲಾಟೆಯನ್ನು ಬಿಡಿಸಿದರು.

ಆಗ 1 ನೇ ಆರೋಪಿಯು ಬೋಸಡಿ ಮಕ್ಕಳಾ ಹಿರಿಯರು ಬಂದಿದ್ದರು ಎಂದು ಉಳಿದುಕೊಂಡಿರಿ ಇಲ್ಲದೆ ಇದ್ದರೆ ನಿಮ್ಮನ್ನು ಜೀವ ಸಹಿತ ಬಿಡುತ್ತಿರಲಿಲ್ಲ ಎಂದು ಜೀವದ ಬೇದರಿಕೆ ಹಾಕಿದರು.

2 ನೇ ಆರೋಪಿ 1 ನೇ ಆರೋಪಿ ಹಲ್ಲೆ ಮಾಡುವಸಮಯದಲ್ಲಿ ಆತನು ಕೂಡಾ ಅಂಗಿ ಹಿಡಿದು ಏಳೆದಾಡಿ ಹಲ್ಲೆ ಮಾಡಿದನು. ನನ್ನ ಹೆಂಡತಿ ಮತ್ತು ಅತ್ತೆ ಇವರನ್ನು ಬೀಡಬೇಡಿರಿ ಎಂದು ಹೋಡೆದು ಸಾಯಿಸಿ ಎಂದು ಹೇಳುತ್ತಾರೆ ಅವಾಚ್ಯ ಶಬ್ಬಗಳಿಂದ ಬೈದಾಡಿದರು.

ಈ ಘಟನೆಯಾಗುವಾಗ ಚಾಸಾ-6 ರಿಂದ 11 ರವರು ಹಾಜರಿದ್ದು ಘಟನೆಯನ್ನು ನೋಡಿ ಜಗಳ ಬಿಡಿಸಿದರು.

ಘಟನೆಯಿಂದ ಪೆಟ್ಟಾಗಿದ್ದು ಚಾಸಾ-5 ರವರನ್ನು ಯಾರೋಬ್ಬ ವ್ಯಕ್ತಿ ಮೋ.ಸೈಕಲ ಮೇಲೆ ಆಸ್ಪತ್ರೆಗೆ ಕರೆದೊಯ್ದರು.

ನಾನು ಘಟನೆ ಸಂಬಂದ ಪೋಲಿಸ ಠಾಣೆಗೆ ಹೋಗಿ ಫಿರ್ಯಾದನ್ನು ನೀಡಿದ್ದೆನೆ. ಫಿರ್ಯಾದನ್ನು ನಾನೇ ಬರೆದು ಫಿರ್ಯಾದನ್ನು ಸಲ್ಲಿಸಿದ್ದೆನೆ.

ಫಿರ್ಯಾದಿಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಮತ್ತು ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

1 ನೇ ಆರೋಪಿ ಹಲ್ಲೆ ಮಾಡಿದ ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ. ಈಗ ಅವು ನ್ಯಾಯಾಲಯದಲ್ಲಿ ಇವೆ. ಅವುಗಳನ್ನು ಮು.ಮಾ-1 ಮತ್ತು 2 ಎಂದು ಗುರುತಿಸಲಾಯಿತು.

ದಿನಾಂಕ 08.05.2021 ರಂದು ಪೋಲಿಸರು ಘಟನೆ ಸ್ಥಳಕ್ಕೆ ಬಂದು ಪಂಚನಾಮೆ ಜರುಗಿಸಿದರು. ಆ ಸಮಯದಲ್ಲಿ ಪಂಚರಾದ ಚಾಸಾ-2 ಮತ್ತು 3 ರವರು ಹಾಜರಿದ್ದರು.

ಪಂಚನಾಮೆ ಕ್ರಮವನ್ನು ಸುಮಾರು ಬೆಳಿಗ್ಗೆ 11-00 ರಿಂದ 12-00 ರ ಸಮಯದಲ್ಲಿ ಜರುಗಿಸಲಾಯಿತು.

ನಾನು ಘಟನೆ ಸ್ಥಳವನ್ನು ಪೋಲಿಸ ಸಿಬ್ಬಂದಿಯವರಿಗೆ ಮತ್ತು ಪಂಚರಿಗೆ ತೋರಿಸಿ ಆರೋಪಿ ಹಲ್ಲೆ ಮಾಡಿದ ಕಲ್ಲುಗಳನ್ನು ಸಹ ತೋರಿಸಿದೇನು.

ಪೋಲಿಸರು ಸದರಿ ಕಲ್ಲುಗಳನ್ನು ಜಪ್ತಿ ಮಾಡಿಕೊಂಡರು.

ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಮತ್ತು ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಈಗ ತೋರಿಸುತ್ತಿರುವ ಭಾವಚಿತ್ರಗಳಲ್ಲಿ ನಾನು ಇದ್ದೇನೆ. ಅವುಗಳನ್ನು ನಿಪಿ-3 ರಿಂದ 5 ಎಂದು ಗುರುತಿಸಲಾಯಿತು. ಸದರಿ ಭಾವಚಿತ್ರಗಳಲ್ಲಿ ನಾನು ಮತ್ತು ಪೋಲಿಸರು ಮತ್ತು ಪಂಚರು ಇದ್ದೇವೆ.

ಸದರಿ ಭಾವಚಿತ್ರಗಳನ್ನು ನನ್ನ ಹೆಂಡತಿಯ ತವರು ಮನೆಯ ಮುಂದೆ ತೆಗೆಯಲಾಗಿದೆ.

ನನಗೆ ಹೋಡಿ ಬಡಿ ಮಾಡಿದ ಆರೋಪಿತರು ಈಗ ನ್ಯಾಯಾಲಯದ ಮುಂದೆ ಇದ್ದಾರೆ. 4 ನೇ ಆರೋಪಿ ಮಾತ್ರ ಇಲ್ಲ ಎಂದು ನುಡಿಯುತ್ತಾರೆ.

4 ನೇ ಆರೋಪಿ ಪರ ವಕೀಲರು ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ತಿಳಿಸಿ 4 ನೇ ಆರೋಪಿ ಪರವಾಗಿ ಕಲಂ 317 ರ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**ಪಾಟಿ ಸವಾಲು** : ಆರೋಪಿತರ ಪರ ವಕೀಲರು ಪಾಟಿಸವಾಲಿಗಾಗಿ ಕಾಲಾವಕಾಶ ಕೋರಿದ್ದು 200/- ರೂಗಳ ಖರ್ಚಿನೊಂದಿಗೆ ಮಂಜೂರು ಮಾಡಲಾಯಿತು.

**ಮರು ವಿಚಾರಣೆ ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ